ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಎಷ್ಟು ಜೂನಿಯರ್ ಕಾಲೇಜುಗಳಿವೆ (ವಿವರ)

ಆ) ಕೊಠಡಿಗಳ ಕೊರತೆ ಇರುವ ಕಾಲೇಜುಗಳು ಎಷ್ಟು (ಹೆಸರು ಮತ್ತು ವಿವರವನ್ನು ಒದಗಿಸುವುದು)

ಇ) ಕುಂದಾಪುರ ಪದವಿ ಪೂರ್ವ ಕಾಲೇಜಿನ ಕಟ್ಟಡ ಅರ್ಧದಲ್ಲಿ ನಿಲ್ಲಲು ಕಾರಣವೇನು

ಈ) ಇದನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) 11 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ.

ವಿವರ :

1. ಕುಂದಾಪುರ	2. ಶಂಕರನಾರಾಯಣ
3. ತೆಕ್ಕಟ್ಟೆ	4. ನಾವುಂದ
5. ಉಪ್ಪುಂದ	6. ವಂಡ್ಸೆ
7. ಕೋಟೇಶ್ವರ	8. ಕಂಬದಕೋಣೆ
9. ಬೈಂದೂರು	10. ಬಿದ್ಕಲ್‌ಕಟ್ಟೆ
11. ಹೊಸಂಗಡಿ	

ಆ. ಮೂರು.

1. ಸರ್ಕಾರಿ ಪದವಿ ಪೂರ್ವ ಕಾಲೇಜು
ಬೈಂದೂರು- 3ಕೊಠಡಿಗಳ ಕೊರತೆ

2. ಸರ್ಕಾರಿ ಪದವಿಪೂರ್ವ ಕಾಲೇಜು
ನಾವುಂದ - 2 ಕೊಠಡಿಗಳ ಕೊರತೆ

3. ಸರ್ಕಾರಿ ಪದವಿ ಪೂರ್ವ ಕಾಲೇಜು
ಉಪ್ಪುಂದ- 1 ಕೊಠಡಿಯ ಕೊರತೆ

ಇ) ಮೊದಲನೆ ಟೆಂಡರ್ ಕಾಮಗಾರಿಯಿಂದ ನೆಲ ಅಂತಸ್ತಿಗೆ ಭಾವಣ ಹಾಕಲಾಗಿದೆ. ಎರಡನೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಕರೆಯಲಾಗಿದೆ.

ಈ) ಹೌದು.

ವಿಷಯ:- ಹಾಸನ ಜಿಲ್ಲೆಯಲ್ಲಿ ಮಲೇರಿಯಾ ಬಗ್ಗೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1714 (2416)

ಶ್ರೀ ಬಿ. ಶಿವರಾಮ್ (ಗಂಡಸಿ ಕ್ಷೇತ್ರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ 1994-95, 1995-96 ರಲ್ಲಿ ಮಲೇರಿಯಾ ರೋಗಕ್ಕೆ ತುತ್ತಾಗಿರುವವರ ಸಂಖ್ಯೆ ಎಷ್ಟು? ಮತ್ತು ರೋಗಕ್ಕೆ ತುತ್ತಾಗಿ ಸತ್ತಿರುವವರ ಸಂಖ್ಯೆ ಎಷ್ಟು?

ಆ) ರೋಗ ನಿಯಂತ್ರಣಕ್ಕೆ ತೆಗೆದುಕೊಂಡಿರುವ ಕ್ರಮಗಳೇನು?

ಇ) ವಿಶೇಷವಾಗಿ ಹಾಸನ ಜಿಲ್ಲೆಗೆ ಈ ರೋಗ ಪ್ರಾರಂಭವಾಗಲು ಕಾರಣವೇನು?

ಈ) ಸರ್ಕಾರದಿಂದ ತುರ್ತು ಕ್ರಮಕ್ಕೆ ಒದಗಿಸಿರುವ ವ್ಯವಸ್ಥೆ ಮತ್ತು ಹಣವೆಷ್ಟು?

ಉ) ಪೂರ್ಣ ನಿಯಂತ್ರಣಕ್ಕೆ ಹಾಕಿಕೊಂಡಿರುವ ಕ್ರಮ ಯೋಜನೆ ಮತ್ತು ಹಣವೆಷ್ಟು?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಹಾಸನ ಜಿಲ್ಲೆಯಲ್ಲಿ ವರದಿಯಾಗಿರುವ ಮಲೇರಿಯಾ ಪ್ರಕರಣಗಳು ಈ ಕೆಳಕಂಡಂತಿವೆ:

ವರ್ಷ	ಮಲೇರಿಯಾ ಪ್ರಕರಣಗಳು	ತೀವ್ರ ಚಿಕಿತ್ಸೆ ನೀಡಿರುವುದು
1993	33,171	32,507
1994	66,082	64,758
1995 (ಜುಲೈವರೆಗೆ)	57,938	56,524

ಹಾಸನ ಜಿಲ್ಲೆಯಲ್ಲಿ ಮಲೇರಿಯಾ ರೋಗದಿಂದ 1994 ಹಾಗೂ 1995ನೇ ಸಾಲಿನಲ್ಲಿ ಇದುವರೆಗೆ ಯಾವುದೇ ಸಾವು ಸಂಭವಿಸಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಆ) 1) ಹಾಸನ ಜಿಲ್ಲೆಯಲ್ಲಿ ಮಲೇರಿಯಾ ಹೆಚ್ಚಾಗಿರುವ ಪ್ರದೇಶಗಳಲ್ಲಿ ಪ್ರತಿವಾರ ತೀವ್ರ ಜ್ವರ ಸಮೀಕ್ಷೆ ನಡೆಸುತ್ತಿದ್ದು ಅದರಂತೆ ಎಲ್ಲಾ ಜ್ವರ ಪೀಡಿತರಿಂದ ರಕ್ತಲೇಪನ ಸಂಗ್ರಹಿಸಿ, ಪರೀಕ್ಷಿಸಿ, ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ.

2) ಹಾಸನ ಜಿಲ್ಲೆಗೆ 50 ಮೆಟ್ರಿಕ್ ಟನ್‌ಗಳ ಡಿ.ಡಿ.ಟಿ. ಕೀಟನಾಶಕವನ್ನು ಸರಬರಾಜು ಮಾಡಲಾಗಿದ್ದು ಇದರ 2ನೇ ಸುತ್ತಿನ ಸಿಂಪಡಣಾ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೊಳ್ಳಲಾಗುತ್ತಿದೆ.

3) ಇದಕ್ಕಾಗಿ 200 ಹೊಸ ಪಂಪುಗಳನ್ನು 10 ಸೂಕ್ಷ್ಮದರ್ಶಕ ಯಂತ್ರಗಳನ್ನು 25,000 ಹೊಸ ಗಾಜಿನ ಹಲಗೆಗಳನ್ನು ಹಾಗೂ 14.80 ಲಕ್ಷ ಕ್ಲೋರೋಕ್ವಿನ್, 1.90 ಲಕ್ಷ ಪ್ರೈಮಾಕ್ವಿನ್ ಗುಳಿಗೆಗಳನ್ನು ಸರಬರಾಜು ಮಾಡಲಾಗಿದೆ.

4) ಮಲೇರಿಯಾ ಸಮಸ್ಯಾತ್ಮಕ ಹಳ್ಳಿಗಳಲ್ಲಿ ಒಟ್ಟು 701 ಔಷಧಿ ವಿತರಣಾ ಕೇಂದ್ರಗಳನ್ನು ಪ್ರತಿ ಒಂದು ಸಾವಿರ ಜನಸಂಖ್ಯೆಗೆ ಒಂದರಂತೆ ಜ್ವರ ಪೀಡಿತರಿಗೆ ಕೂಡಲೇ ಚಿಕಿತ್ಸೆ ನೀಡುವ ಸಲುವಾಗಿ ಸ್ಥಾಪಿಸಲಾಗಿದೆ. ಹಾಗೂ ಸಾಕಷ್ಟು ಕ್ಲೋರೋಕ್ವಿನ್ ಮಾತ್ರೆಗಳನ್ನು ಈ ಕೇಂದ್ರಗಳಿಗೆ ಪ್ರತಿ 15 ದಿನಗಳಿಗೊಮ್ಮೆ ಸರಬರಾಜು ಮಾಡಲಾಗಿದೆ.

5) ತುರ್ತಾಗಿ ರಕ್ತಲೇಪನಗಳನ್ನು ಪರೀಕ್ಷಿಸಲು ಮಲೇರಿಯಾ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಕ್ಷೇತ್ರ ಪ್ರಯೋಗಶಾಲೆಯನ್ನು ತೆರೆಯಲಾಗಿದ್ದು, ಸಾಕಷ್ಟು ಸಂಖ್ಯೆಯಲ್ಲಿ ಪ್ರಯೋಗಶಾಲಾ ತಂತ್ರಜ್ಞರನ್ನು ನಿಯೋಜಿಸಲಾಗಿದೆ. ಇದಲ್ಲದೆ 8 ನಿವೃತ್ತ ಪ್ರ ಶಾಲಾ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದ್ದು, ಸಮಸ್ಯಾತ್ಮಕ ಪ್ರಾ.ಆ.ಕೇಂದ್ರಗಳಿಗೆ ನಿಯೋಜಿಸಲಾಗಿದೆ.

6) ಜಿಲ್ಲಾ ಪಂಚಾಯಿತಿ ವತಿಯಿಂದ 5 ವಾಹನಗಳನ್ನು ಪಡೆದಿದ್ದು ಜಿಲ್ಲಾಮಟ್ಟದಲ್ಲಿ 8 ತಂಡಗಳನ್ನು ನೇಮಿಸಿ ಸಮಸ್ಯಾತ್ಮಕ ಹಳ್ಳಿಗಳಲ್ಲಿ ಪ್ರತಿ ದಿನ ರಕ್ತಲೇಪನ ಸಂಗ್ರಹಣೆ ಪರೀಕ್ಷೆ

ಹಾಗೂ ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ.

7) ಈ ನಿಯಂತ್ರಣ ಕಾರ್ಯಕ್ರಮದ ಮೇಲ್ವಿಚಾರಣೆಗಾಗಿ ಸಮಸ್ಯೆ ಇಲ್ಲದ ಪ್ರದೇಶಗಳಿಂದ ಸಮಸ್ಯಾತ್ಮಕ ಪ್ರದೇಶಗಳಿಗೆ ಹಿರಿಯ ಆರೋಗ್ಯ ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ.

8) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು ಪ್ರತಿ ತಿಂಗಳು ಹಾಸನ ಜಿಲ್ಲೆಗೆ ಭೇಟಿ ನೀಡಿ ಕಾರ್ಯಕ್ರಮದ ಪ್ರಗತಿಯನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸುತ್ತಿದ್ದಾರೆ.

ಇ) ಹಾಸನ ಜಿಲ್ಲೆ ಮಾತ್ರವಲ್ಲದೆ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿಯೂ ಸಹ ಈ ರೋಗವು ಏಕಕಾಲದಲ್ಲಿ ಉಲ್ಬಣಗೊಂಡಿದ್ದು, ಇದಕ್ಕೆ ಕಾರಣಗಳು ಈ ಕೆಳಕಂಡಂತಿವೆ.

1) ರೈಲ್ವೆ ಬ್ರಾಡ್‌ಗೇಜ್ ಪರಿವರ್ತನೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ 1992-93 ನೇ ಸಾಲಿನಲ್ಲಿ ಮಲೇರಿಯಾ ಸಮಸ್ಯಾತ್ಮಕ ಹೊರರಾಜ್ಯಗಳಿಂದ ವಲಸೆ ಬಂದ ಕೆಲಸಗಾರರು ಈ ರೋಗ ಹರಡಲು ಮುಖ್ಯ ಕಾರಣವಾಗಿವೆ.

2) ಹೇಮಾವತಿ ಹಾರಂಗಿ ಮುಂತಾದ ಜಲಾಶಯಗಳಿಂದ ಕಾಲುವೆ ಕೆಲಸ, ಕೈಗಾರಿಕಾ ಅಭಿವೃದ್ಧಿ, ಕೃಷಿ ಕಟ್ಟಡಗಳ ನಿರ್ಮಾಣ ಹಾಗೂ ಇನ್ನಿತರ ಅಭಿವೃದ್ಧಿ ಕಾರ್ಯಗಳಿಗೆ ಜನರು ವಲಸೆ ಬಂದಿರುವುದೇ ಅಲ್ಲದೆ ಈ ಕೆಲಸಗಳಿಂದ ಹೆಚ್ಚಾಗಿರುವ ನೀರು ನಿಂತ ಸ್ಥಳಗಳು ಸೊಳ್ಳೆ ಉತ್ಪತ್ತಿಗೆ ಪೂರಕವಾಗಿ ಮಲೇರಿಯಾ ಹರಡಲು ಕಾರಣವಾಗಿದೆ.

ಈ) ಜಿಲ್ಲೆಗೆ ತುರ್ತು ಕ್ರಮ ಕೈಗೊಂಡ ಬಗ್ಗೆ ಕ್ರಮ ಸಂಖ್ಯೆ 'ಆ' ದಲ್ಲಿ ತಿಳಿಸಲಾಗಿದೆ. ಮಲೇರಿಯಾ ನಿಯಂತ್ರಣಕ್ಕೆ ಬೇಕಾದ ಸಾಮಾನುಗಳಿಗೆ 1995-96ನೇ ಸಾಲಿನಲ್ಲಿ ಈ ಕೆಳಕಂಡಂತೆ ಹಣ ಒದಗಿಸಲಾಗಿದೆ. (ಹಾಸನ ಜಿಲ್ಲೆಗೆ).

1)	ಕೀಟನಾಶಕ (ಡಿಡಿಟಿ)	25.0 ಲಕ್ಷಗಳಲ್ಲಿ
2)	ಔಷಧಿಗಳಿಗೆ	15.0
3)	ಕೀಟನಾಶಕ ಉಪಕರಣಗಳು ಮತ್ತು ದಿನಗೂಲಿ ಮತ್ತು ಇಂಧನ ವೆಚ್ಚ	2.1
4)	ಸೂಕ್ಷ್ಮದರ್ಶಕ ಯಂತ್ರ, ಗಾಜಿನ ಹಲಗೆಗಳು ಹಾಗೂ ಸೂಜಿಗಳು	2.0
	ಒಟ್ಟು ರೂ.	44.1

ಉ) ಪೂರ್ಣ ನಿಯಂತ್ರಣಕ್ಕೆ ಈ ಕೆಳಕಂಡ ಕ್ರಮ ಹಾಗೂ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1) ಹಾಸನ ಜಿಲ್ಲೆಯ ಸಮಸ್ಯಾತ್ಮಕ ಪ್ರದೇಶಗಳಾದ ಹಾಗೂ ಚಿತ್ರದುರ್ಗ ಹಾಗೂ ಚಿಕ್ಕಮಗಳೂರು ಅಂಚಿನಲ್ಲಿರುವ ಪ್ರದೇಶಗಳಲ್ಲಿ ಭಾರತ ಸರ್ಕಾರದ ಮಲೇರಿಯಾ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ಕೂಲಂಕುಷವಾದ ಅಧ್ಯಯನ ನಡೆಸುತ್ತಿದ್ದು,

ವಿಶೇಷವಾದ ಯೋಜನೆಯನ್ನು ರೂಪಿಸುತ್ತಿದ್ದಾರೆ. ಅದರಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

2) ಡಿ.ಡಿ.ಟಿ. ಕೀಟನಾಶಕಕ್ಕೆ ರೋಗವಾಹಕ ಸೊಳ್ಳೆಗಳ ಪ್ರರೋಧ ವ್ಯಕ್ತ ಪಟ್ಟಿರುವ ಸಮಸ್ಯಾತ್ಮಕ ಸ್ಥಳಗಳಲ್ಲಿ ಮತ್ತು ಮಲೇರಿಯಾ ಹೆಚ್ಚಾಗಿ ಕಂಡುಬಂದಿರುವ ಇತರ ಪ್ರದೇಶಗಳಲ್ಲಿ ಹೊಸ ಕೀಟನಾಶಕವಾದ ಸಿಂಥಟಿಕ್ ಪೈರಿಥ್ರಾಯಿಡ್‌ನ್ನು ಬಳಸಲು ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಪರಿಶೀಲನೆಯಲ್ಲಿದೆ.

3) ಖಾಲಿ ಇರುವ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳನ್ನು ತುಂಬಲು ಶೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುತ್ತದೆ.

4) ತುರ್ತು ಮಲೇರಿಯಾ ನಿಯಂತ್ರಣಕ್ಕಾಗಿ ಒಂದು ಶಾಶ್ವತವಾದ ಸಂಚಾರಿ ಮಲೇರಿಯಾ ನಿಯಂತ್ರಣ ಘಟಕವನ್ನು ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

5) ಜೈವಿಕ ಪರಿಸರ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ವಿವಿಧ ಇಲಾಖಾ ಮುಖ್ಯಸ್ಥರನ್ನೊಳಗೊಂಡಂತೆ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ವಿವಿಧ ನಿಯಂತ್ರಣ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

6) ಇದಲ್ಲದೆ ಈಗಾಗಲೇ ಕೈಗೊಂಡಿರುವ ನಿಯಂತ್ರಣ ಕಾರ್ಯಗಳನ್ನು ಮಲೇರಿಯಾ ರೋಗ ಹತೋಟಿಗೆ ಬರುವವರೆಗೆ ಮುಂದುವರಿಸಲಾಗುವುದು.

7) 1995-96ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಪೂರ್ಣ ನಿಯಂತ್ರಣಕ್ಕೆ ಈ ಕೆಳಕಂಡಂತೆ ಹಣ ಒದಗಿಸಲಾಗಿದೆ.

1) ಕೀಟನಾಶಕ	: ರೂ.	60.00ಲಕ್ಷ
2) ಔಷಧಿ ಮತ್ತು ಮಾತ್ರೆಗಳು	: ರೂ.	25.00
3) ಸಿಂಪಡಣಾ ಸಲಕರಣೆಗಳು	: ರೂ.	1.00
4) ದಿನಗೂಲಿ	: ರೂ.	2.00
5) ಪ್ರಯೋಗಶಾಲಾ ಸಲಕರಣೆಗಳು	: ರೂ.	2.50
6) ಸಂಚಾರಿ ಘಟಕ	: ರೂ.	5.00
7) ಜೈವಿಕ ಪರಿಸರ ನಿಯಂತ್ರಣಕ್ಕೆ	: ರೂ.	2.00
8) ಆರೋಗ್ಯ ಶಿಕ್ಷಣ ಮತ್ತು ತರಬೇತಿ	: ರೂ.	0.25
ಒಟ್ಟು	: ರೂ.	97.75 ಲಕ್ಷ

ವಿಷಯ:- ಹಾಸನ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆ ಕುರಿತು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1715 (1991)

ಶ್ರೀ ಬಿ.ಶಿವರಾಮು (ಗಂಡಸಿ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ 8 ಕ್ಷೇತ್ರಗಳಲ್ಲಿ ಇರುವ ಪ್ರಾಥಮಿಕ ಕಿರಿಯ ಮತ್ತು ಹಿರಿಯ ಶಾಲೆಗಳ ಸಂಖ್ಯೆ ಎಷ್ಟು ಮತ್ತು ಶಾಖಾ ಶಾಲೆಗಳ ಸಂಖ್ಯೆ ಎಷ್ಟು? (ಕ್ಷೇತ್ರವಾರು ಮಾಹಿತಿ ಕೊಡುವುದು);